# ವಿಜೃಂಭಣೆಯಿಂದ ಜರುಗಿದ ಡೊಂಬರಳ್ಳಿ ಮಾರುತೇಶ್ವರ ರಥೋತ್ಸವ




ಕೊಪ್ಪಳ : ತಾಲೂಕಿನ ಡೊಂಬರಳ್ಳಿ ಗ್ರಾಮದಲ್ಲಿ ಯುಗಾದಿ ನಿಮಿತ್ಯ ಶ್ರೀ ಮಾರುತೇಶ್ವರ ಮಹಾ ರಥೋತ್ಸವ ವಿಜೃಂಭಣೆಯಿಂದ ಗುರುವಾರ ಸಂಜೆ ನೆರವೇರಿತು. ಮೈನಳ್ಳಿ ಹಾಗೂ ಬಿಕನಳ್ಳಿ ಉಜ್ಜಯನಿ ಶಾಖಾ ಮಠದ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ ರಥೋತ್ಸವಕ್ಕೆ ಚಾಲನೆ ನೀಡಿದರು. ರಥ ಸಾಂಘವಾಗಿ ಸಾಗುತ್ತಿದ್ದಂತೆ ನೆರೆದಿದ್ದ ಭಕ್ತರು ಬಾಳೆ ಹಣ್ಣು, ಉತ್ತತ್ತಿ ಎಸೆಯವ ಮೂಲಕ ಪುನೀತರಾದರು.

**ಪತಾಕಿ ಸವಾಲು :**

ಶ್ರೀ ಮಾರುತೇಶ್ವರ ಪತಾಕಿ ಸವಾಲು ರಥೋತ್ಸವಕ್ಕೂ ಮುನ್ನ ನೆರವೇರಿತು. ಕೊಪ್ಪಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಾರಡ್ಡಿ ಗಲಬಿ 35 ಸಾವಿರ ರುಪಾಯಿಗೆ ಸವಾಲು ಮಾಡಿಕೊಂಡು, ಮೆರವಣಿಗೆ ಮೂಲಕಪತಾಕಿ ಮನೆಗೆ ಒಯ್ದರು. ಕಳೆದ ವರ್ಷ ಸವಾಲು ಮಾಡಿದ್ದ ಸುಶಿಲಮ್ಮ ಮಾಲಿಪಾಟೀಲ್ ಅವರಿಗೆ 55 ಸಾವಿರ ರುಪಾಯಿಗೆ ಸವಾಲಿಗಿದ್ದನ್ನು ಮೆರವಣಿಗೆಯಲ್ಲಿ ತಂದು ಸಲ್ಲಿಸಿದರು.

# ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ವಿಜಯಪೂರ ಜಿಲ್ಲೆಗೆ ಮೂರನೇ ಸ್ಥಾನ



ವಿಜಯಪುರ ಏ. : ಮಾರ್ಚ್ 2024ರಲ್ಲಿ ಜರಗಿದ ದ್ವಿತೀಯ ಪಿಯುಸಿ ಪರೀಕ್ಷೆಯ ಪಲಿತಾಂಶ ಬುಧವಾರದಂದು ಪ್ರಕಟವಾಗಿದ್ದು ವಿಜಯಪುರ ಜಿಲ್ಲೆ ಒಟ್ಟು 94.89% ಫಲಿತಾಂಶದೊಂದಿಗೆ ರಾಜ್ಯದಲ್ಲಿ 3ನೇ ಸ್ಥಾನವನ್ನು ಪಡೆದಿದೆ ಎಂದು ಜಿಲ್ಲಾಧಿಕಾರಿ ಟಿ. ಭೂ ಬಾಲನ್ ಹೇಳಿದರು. ಜಿಲ್ಲಾಧಿಕಾರಿ ಕಚೇರಿಯಲ್ಲಿ ಬುಧವಾರದಂದು ಪ್ರಕಟಗೊಂಡ ಜಿಲ್ಲೆಯ ದ್ವಿತೀಯ ಪಿ ಯು ಸಿ ಫಲಿತಾಂಶ ಕುರಿತು ಮಾತನಾಡಿ ಕಲಾ ವಿಭಾಗದಲ್ಲಿ 16,215 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅದರಲ್ಲಿ 14,174 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಒಟ್ಟು 4,088 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 3,725 ವಿದ್ಯಾರ್ಥಿಗಳ ಉತ್ತೀರ್ಣರಾಗಿದ್ದಾರೆ. ಇನ್ನೂ ವಿಜ್ಞಾನ ವಿಷಯದಲ್ಲಿ 11,533 ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆದಿದ್ದು ಅದರಲ್ಲಿ 10,944 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಳೆದ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಜಿಲ್ಲೆಯು 5ನೇ ಸ್ಥಾನವನ್ನು ಹೊಂದಿತ್ತು. ಆದರೆ ಈ ವರ್ಷದ ಫಲಿತಾಂಶದಲ್ಲಿ ಸುಧಾರಣೆ ಕಂಡು ರಾಜ್ಯಕ್ಕೆ ಮೂರನೇ ಸ್ಥಾನ ಪಡೆದಿರುತ್ತದೆ. ಮುಂದಿನ ವರ್ಷದಲ್ಲಿ ಮೊದಲನೇ ಸ್ಥಾನ ಪಡೆಯಲು ಜಿಲ್ಲಾಡಳಿತದಿಂದ ತಯಾರಿ ನಡೆಸಲಾಗುವುದು. ಜಿಲ್ಲೆಯ ಫಲಿತಾಂಶ ಸುಧಾರಣೆಯಲ್ಲಿ ಶ್ರಮವಹಿಸಿದ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಅಧಿಕಾರಿಗಳ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ವಿಜಯಪುರದ ಎಸ್ ಎಸ್ ಪದವಿ ಪೂರ್ವ ಕಾಲೇಜಿನ ಕಲಾ ವಿಭಾಗದ ವಿಧ್ಯಾರ್ಥಿ ವೇದಾಂತ ನಾವಿ ಪ್ರತಿಶತ 99.33 ಅಂಕಗಳನ್ನು ಪಡೆದು ರಾಜ್ಯ ಹಾಗೂ ಜಿಲ್ಲೆಗೆ ಪ್ರಥಮ ಸ್ಥಾನವನ್ನು ಪಡೆದಿರುವುದು ಸಂತಸ ತಂದಿದೆ ಎಂದರು.

# ಶ್ರೀರಾಮನ ವಂಶಸ್ಥರ ಕಾಲದ 3,730 ನಾಣ್ಯ ಪತ್ತೆ

ಭಾರತ ಹೇಳಿ ಕೇಳಿ ಕಲೆ, ಚಿತ್ರಕಲೆ, ಶಿಲ್ಪ ಕಲೆ ಎಲ್ಲದರಲ್ಲೂ ಶ್ರೀಮಂತ ದೇಶವಾಗಿತ್ತು. ಇಲ್ಲಿನ ಶಿಲ್ಪಗಳಿಗೆ, ಕೆತ್ತನೆಗಳಿಗೆ, ಪುರಾತನ ವಸ್ತುಗಳಿಗೆ ಮಾರು ಹೋಗದವರೇ ಇಲ್ಲ. ರಾಜರ ಆಳ್ವಿಕೆ ಕಾಲದಿಂದ ಹಿಡಿದು ಸ್ವಾತಂತ್ರ್ಯ ಪೂರ್ವದವರೆಗೂ ಭಾರತದ ಅನೇಕ ಪರಂಪರಾಗತ ವಸ್ತುಗಳು ವಿದೇಶಿಯರ ಕೈ ವಶವಾದವು. ಕೆಲವನ್ನು ವಶಪಡಿಸಿಕೊಂಡರೆ, ಇನ್ನೂ ಕೆಲವು ಕಳುವಾಗಿ ಅವರ ಪಾಲಾಗಿದ್ದವು. ಸ್ವಾತಂತ್ರ್ಯದ ನಂತರವೂ ಪುರಾತನ ವಸ್ತುಗಳು ಭಾರತದಿಂದ ಕಾಣೆಯಾಗಿವೆ. ಇತ್ತೀಚೆಗೆ ಭಾರತದಲ್ಲಿ ಅನೇಕ ವಸ್ತುಗಳು ಮತ್ತೆ ಲಭಿಸುತ್ತಿದೆ. ದೇಶದ ಕೆಲ ಪ್ರದೇಶಗಳಲ್ಲಿ ಹಳೆಯ ವಿಗ್ರಹಗಳು ಸಿಗುತ್ತಿದ್ದು, ಅದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ ಎನ್ನಬಹುದು.

ತೆಲಂಗಾಣದ ಪಾರಂಪರಿಕ ಇಲಾಖೆಯು ರಾಜಧಾನಿ ಹೈದರಾಬಾದ್‌ನಿಂದ 110 ಕಿಮೀ ದೂರದಲ್ಲಿರುವ ಬೌದ್ಧ ಪರಂಪರೆಯ ತಾಣವಾದ ಫಣಿಗಿರಿಯಲ್ಲಿ ದೇವಾಲಯ ಉತ್ಖನನ ಮಾಡುತ್ತಿದೆ. ಮಾರ್ಚ್ 2024ರ ಕೊನೆಯ ವಾರದಲ್ಲಿ ಪಾರಂಪರಿಕ ಇಲಾಖೆ ಉತ್ಖನನ ನಡೆಯುತ್ತಿರುವಾಗ ಭೂಮಿಯಲ್ಲಿ ಹುದುಗಿ ಹೋಗಿದ್ದ ವಸ್ತುಗಳು ಪತ್ತೆಯಾಗಿದೆ.

ಉತ್ಖನನ ನಿರ್ದೇಶಕ ಎನ್. ಸಾಗರ್ ಮತ್ತು ಸಹ ಅಧಿಕಾರಿ ಬಿ. ಮಲ್ಲು ಅವರ ನೇತೃತ್ವದಲ್ಲಿ ತೆಲಂಗಾಣದ ಸೂರ್ಯಪೇಟ್ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದ್ದ ತಂಡಕ್ಕೆ ಮಾರ್ಚ್ 29ರಂದು ದೊಡ್ಡ ಮಣ್ಣಿನ ಮಡಕೆ ಸಿಕ್ಕಿದೆ. ಕೂಡಲೇ ಈ ಕುರಿತು ಮಾಹಿತಿ ಪಡೆದು ತೆಲಂಗಾಣ ಪುರಾತತ್ವ ಇಲಾಖೆಯ ಪ್ರಧಾನ ಕಾರ್ಯದರ್ಶಿ ಲತಾ ಶೈಲಜಾ ರಾಮಯ್ಯ ಮತ್ತು ಪರಂಪರೆ ಇಲಾಖೆ ನಿರ್ದೇಶಕಿ ಭಾರತಿ ಹೊಳ್ಳಿಕೇರಿ ಅವರು ಉತ್ಖನನ ಸ್ಥಳಕ್ಕೆ ಭೇಟಿ ಪರಿಶೀಲನೆ ನಡೆಸಿದ್ದಾರೆ. ಈ ವೇಳೆ ಮಣ್ಣಿನ ಮಡಕೆಗಳಲ್ಲಿ ಸಾವಿರಾರು ನಾಣ್ಯಗಳು ಪತ್ತೆಯಾಗಿವೆ.ಭೂಮಿಯಲ್ಲಿ ದೊರೆತ ಮಣ್ಣಿನ ಮಡಕೆ 16.7 ಸೆಂ ವ್ಯಾಸ ಮತ್ತು 15 ಸೆಂ ಎತ್ತರವಿತ್ತು. ಮಡಿಕೆಯಲ್ಲಿ ಸೀಸದಿಂದ ಮಾಡಿದ ಈ ನಾಣ್ಯಗಳ ಸಂಖ್ಯೆ 3,730 ಪತ್ತೆಯಾಗಿದೆ. ನಾಣ್ಯದ ಮೇಲೆ ಒಂದು ಬದಿಯಲ್ಲಿ ಆನೆಯ ಚಿಹ್ನೆ, ಮತ್ತೊಂದು ಬದಿಯಲ್ಲಿ ಉಜ್ಜಯಿನಿಯ ಚಿಹ್ನೆ ಕಂಡು ಬಂದಿದೆ.

ಸ್ಟ್ರಾಟಿಗ್ರಾಫಿಕ್ ಮತ್ತು ಟೈಪೊಲಾಜಿಕಲ್ ಅಧ್ಯಯನ ಅನ್ವಯ ಉತ್ಖನನದಲ್ಲಿ ದೊರೆತ ನಾಣ್ಯಗಳು ಇಕ್ಷ್ವಾಕು (ಸೂರ್ಯ ವಂಶ) ಅವಧಿಗೆ ಸೇರಿದವು ಎಂದು ತಿಳಿದುಬಂದಿದೆ. ಮಣ್ಣಿನ ಮಡಕೆಯಿಂದ ಸಿಗುವ ಪ್ರತಿ ನಾಣ್ಯದ ಸರಾಸರಿ ತೂಕ 2.3 ಗ್ರಾಂ ಇದ್ದು, ಭಗವಾನ್ ರಾಮ ಇಕ್ಷ್ವಾಕು ವಂಶಕ್ಕೆ ಸೇರಿದ್ದು, ನಾಣ್ಯಗಳ ಹೊರತಾಗಿ ಉತ್ಖನನ ಸ್ಥಳದಿಂದ ಇನ್ನೂ ಅನೇಕ ಅಮೂಲ್ಯವಾದ ಅವಶೇಷಗಳು ಪತ್ತೆಯಾಗಿದ್ದು, ಸ್ಥಳದಲ್ಲಿ ಉತ್ಖನನ ಮುಂದುವರೆದಿದೆ.

ಉತ್ಖನನದಲ್ಲಿ ಕಲ್ಲಿನ ವಸ್ತುಗಳು, ಗಾಜಿನ ಮಣಿಗಳು, ಶಂಖ, ಬಳೆಗಳ ತುಣುಕು, ಆಕೃತಿಗಳು, ಮುರಿದ ಸುಣ್ಣದ ಪ್ರತಿಮೆಗಳು ಕಂಡುಬಂದಿವೆ. ಅಲ್ಲದೇ ಕಬ್ಬಿಣದ ಮೊಳೆಗಳು ಮತ್ತು ಕುಂಬಾರಿಕೆ ಸೇರಿದಂತೆ ಅನೇಕ ಇತರ ಅಮೂಲ್ಯವಾದ ಸಾಂಸ್ಕೃತಿಕ ಮತ್ತು ರಚನಾತ್ಮಕ ಅವಶೇಷಗಳನ್ನು ಕಂಡುಕೊಂಡಿದೆಯಂತೆ. ಉತ್ಖನನ ನಡೆದ ಸ್ಥಳವೂ ಫಣಿಗಿರಿ ಎಂಬ ಗ್ರಾಮದ ವ್ಯಾಪ್ತಿಯಲ್ಲಿ ಬರುತ್ತದೆ. ಸಂಸ್ಕೃತದಲ್ಲಿ ಫಣಿ ಎಂದರೆ ಹಾವು ಮತ್ತು ಗಿರಿ ಎಂದರೆ ಬೆಟ್ಟ ಎಂಬರ್ಥವನ್ನು ನೋಡಿತ್ತದೆ.

ಗ್ರಾಮದಲ್ಲಿ ಕ್ರಿ.ಪೂ.1000 ರಿಂದ ಕ್ರಿ.ಶ.18ನೇ ಶತಮಾನದವರೆಗೆ ಜೀವಿತಾವಧಿ ಇತ್ತು ಎಂದು ಅಧ್ಯಯನದಿಂದ ತಿಳಿದುಬಂದಿದೆ. ಫಣಿಗಿರಿಯು ಡೆಕ್ಕನ್‌ನ ಪಶ್ಚಿಮ ಮತ್ತು ಪೂರ್ವ ಕರಾವಳಿಯನ್ನು ಸಂಪರ್ಕಿಸುವ ಪ್ರಾಚೀನ ವ್ಯಾಪಾರ ಮಾರ್ಗದಲ್ಲಿ ಬೆಟ್ಟದ ತುದಿಯಲ್ಲಿ ಆಯಕಟ್ಟಿನ ಸ್ಥಳದಲ್ಲಿರುವ ಪ್ರಮುಖ ಬೌದ್ಧ ಮಠಗಳಲ್ಲಿ ಒಂದಾಗಿದೆ ಎಂದು ನಂಬಲಾಗಿದೆ. ಸ್ಥಳದಲ್ಲಿ ಪುರಾತತ್ವ ಇಲಾಖೆ 2001 ರಿಂದಲೂ ಉತ್ಖನನ ಆರಂಭಿಸಿದೆ. ಇಲಾಖೆಯ ಮಾಹಿತಿ ಅನ್ವಯ, ಹಿಂದಿನ ಉತ್ಖನನದ ವೇಳೆ ಮಹಾಸ್ತೂಪ, ಅರ್ಧವೃತ್ತಾಕಾರದ ಚೈತ್ಯಗೃಹ, ಮನ್ನತ್ ಸ್ತೂಪ, ಸ್ತಂಭಗಳ ಸಭಾಭವನ, ವಿಹಾರ ಮುಂತಾದ ವಸ್ತುಗಳು ಪತ್ತೆಯಾಗಿದೆ.

# ಮೂರು ತಿಂಗಳಲ್ಲಿ 1ಲಕ್ಷ ಯುನಿಟ್‌ಗಳ ಬುಕ್ಕಿಂಗ್ ದಾಟಿದ ನೂತನ ಹುಂಡೈ ಕ್ರೆಟಾ

ಕೊರಿಯಾದ ಮೂಲದ ಅಟೋಮೊಬೈಲ್ ಕಂಪನಿ ಹ್ಯುಂಡೈ ಮೋಟಾರ್ಸ್ ಭಾರತದಲ್ಲಿ ಬಿಡುಗಡೆ ಮಾಡಿದ ನ್ಯೂ ಹ್ಯುಂಡೈ ಅಖಇಖಂ 2024 ನೂತನ ಕಾರ್‌ನ ಬುಕ್ಕಿಂಗ್ ಆರಂಭಿಸಿತ್ತು. ಈ ಕಾರ್‌ನ್ನು ಪಡೆಯಲು ಗ್ರಾಹಕರು ಮುಗಿಬಿದ್ದಿದ್ದಾರೆ. ಬಕ್ಕಿಂಗ್ ಆರಂಭವಾದ ಮೂರೇ ತಿಂಗಳಲ್ಲಿ ಈ ಕಾರ್‌ನ 1 ಲಕ್ಷ ಯುನಿಟ್ ದಾಟಿದೆ.

ಕ್ರೆಟ್ 2024 ಕಾರ್‌ನ ಪ್ರಿ ಬುಕ್ಕಿಂಗ್‌ನಲ್ಲಿ ಸನ್‌ರೂಫ್ ಕಾರ್‌ಗಳನ್ನು ಶೇಕಡಾ 71 ರಷ್ಟು ಜನರು ಬುಕ್ ಮಾಡಿದ್ದಾರೆ. ಇನ್ನು ಉಳಿದ ಜನ ಕಂಟೆಂಡರ್ ಕಾರ್‌ನ್ನು ಬುಕ್ ಮಾಡಿದ್ದಾರೆ. ತನ್ನ ವಿಶಿಷ್ಟ ಸೌಲಭ್ಯಗಳಿಂದ ಹೊಸ ಕ್ರೆಟಾ ಎಲ್ಲಡೆ ಸದ್ದು ಮಾಡುತ್ತಿದೆ. ಇದರಲ್ಲಿ ಪ್ರಮುಖವಾದವು ಎಂಪಿಐ ಪೆಟ್ರೋಲ್ (6MT/IVT), ಯು1 ಸಿಆರ್‌ಡಿಐ ಡೀಸೆಲ್ (6MT/6AT), ಟರಬೋ ಜಿಡಿಐ ಪೆಟ್ರೋಲ್ (7DCT) ನಲ್ಲಿ ಲಭ್ಯವಿದೆ.ಸರೌಂಡ್ ವ್ಯೂ ಮಾನಿಟರ್ (SVM), ಟೆಲಿಮ್ಯಾಟಿಕ್ಸ್ ಸ್ವಿಚ್‌ನೊಂದಿಗೆ ಎಲೆಕ್ಟ್ರೋ ಕ್ರೋಮಿಕ್ ಮಿರರ್ (ECM), ಎಲೆಕ್ಟ್ರಿಕ್ ಪಾರ್ಕಿಂಗ್ ಬ್ರೇಕ್/ಆಟೋ ಹೋಲ್ಡ್, ಫ್ರಂಟ್ ಪಾರ್ಕಿಂಗ್ ಸೆನ್ಸರ್ ಮತ್ತು ಬ್ಲೈಂಡ್-ಸ್ಪಾಟ್ ವ್ಯೂ ಮಾನಿಟರ್ (BVM) ನಂತಹ ಸುಧಾರಿತ ವೈಶಿಷ್ಟ್ಯಗಳನ್ನು ಹೊಸ ಕ್ರೆಟಾ 2024ಕ್ಕೆ ಸೇರಿಸಲಾಗಿದೆ. ಸ್ಟ್ಯಾಂಡರ್ಡ್ ಸುರಕ್ಷತಾ ವೈಶಿಷ್ಟ್ಯಗಳನ್ನು ಒಳಗೊಂಡಂತೆ ಎಲ್ಲಾ ಆಸನಗಳಿಗೆ 3-ಪಾಯಿಂಟ್ ಸೀಟ್ ಬೆಲ್ಟ್‌ಗಳನ್ನು ಹೊಂದಿದೆ. ಎಲ್ಲಾ ನಾಲ್ಕು ಚಕ್ರಗಳಲ್ಲಿ ಡಿಸ್ಕ್ ಬ್ರೇಕ್‌ಗಳು, ಎಲೆಕ್ಟ್ರಾನಿಕ್ ಸ್ಟೆಬಿಲಿಟಿ ಕಂಟ್ರೋಲ್ ಜೊತೆಗೆ ವೆಹಿಕಲ್ ಸ್ಟೆಬಿಲಿಟಿ ಮ್ಯಾನೇಜ್‌ಮೆಂಟ್, ಹಿಲ್-ಸ್ಟಾರ್ಟ್ ಅಸಿಸ್ಟ್ ಕಂಟ್ರೋಲ್, ಎಮರ್ಜೆನ್ಸಿ ಸ್ಟಾಪ್ ಸಿಗ್ನಲ್, ಟೈರ್ ಪ್ರೆಶರ್ ಮಾನಿಟರಿಂಗ್ ಸಿಸ್ಟಮ್ ಹೈಲೈನ್, ಮತ್ತು ಡ್ರೈವರ್ ಆಂಕರ್ ಪ್ರಿಟೆನ್ಷನರ್ ಜೊತೆಗೆ ಫ್ರಂಟ್ ಸೀಟ್‌ಬೆಲ್ಟ್ ಪ್ರಿಟೆನ್ಷನರ್‌ನ್ನು ಹೊಂದಿದೆ. ಹೊಸ ಹ್ಯುಂಡೈ ಕ್ರೆಟಾ 2024 6 ಏರ್‌ಬ್ಯಾಗ್‌ಗಳು ಹೊಂದಿದೆ. ಈ ಖಗಗಿ ಯ ಆರಂಭಿಕ ಎಕ್ಸ್ ಶೋ ರೂಂ ಬೆಲೆ 10,99,900 ರೂ. ಆಗಿದೆ.

ಇತ್ತೀಚೆಗೆ ಬಿಡುಗಡೆಯಾದ ಹೊಸ ಕ್ರೆಟಾಗೆ ಸಹ ಅದ್ಭುತ ಪ್ರತಿಕ್ರಿಯೆ ವ್ಯಕ್ತವಾಗಿದೆ. ಹೊಸ ಹ್ಯುಂಡೈ ಕ್ರೆಟಾದೊಂದಿಗೆ, ನಾವು ಭಾರತೀಯ ಮಾರುಕಟ್ಟೆಗೆ ಉತ್ತಮ ಉತ್ಪನ್ನಗಳನ್ನು ನೀಡುವ ನಮ್ಮ ಪ್ರಯತ್ನವನ್ನು ಮುಂದುವರಿಸುತ್ತೇವೆ, 'ಮೇಕ್ ಇನ್ ಇಂಡಿಯಾ' ಕಂಪನಿಯ ಬದ್ಧತೆಯನ್ನು ನಾವು ಬಲಪಡಿಸುತ್ತೇವೆ ಎಂದು ಹ್ಯುಂಡೈ ಮೋಟಾರ್ ಇಂಡಿಯಾ ಲಿಮಿಟೆಡ್‌ನ ಸಿಒಒ ತರುಣ್ ಗಾರ್ಗ್ ಹೇಳಿದ್ದಾರೆ.ಹುಂಡೈ ಕ್ರೆಟಾವನ್ನು ಮಾರ್ಚ್‌ನಲ್ಲಿ 16,458 ಗ್ರಾಹಕರು ಖರೀದಿಸಿದ್ದರು.

ಇದು ವಾರ್ಷಿಕ ಶೇಕಡಾ 17 ರಷ್ಟು ಹೆಚ್ಚಳವಾಗಿದೆ. ಸರಿಯಾಗಿ ಒಂದು ವರ್ಷದ ಹಿಂದೆ ಮಾರ್ಚ್‌ನಲ್ಲಿ 14,026 ಗ್ರಾಹಕರು ಖರೀದಿಸಿದ್ದರು. ಕ್ರೆಟಾ ಈ ವರ್ಷದ ಫೆಬ್ರವರಿಯಲ್ಲಿ ಟಾಪ್ 10 ಕಾರುಗಳ ಪಟ್ಟಿಯಲ್ಲಿ 7 ನೇ ಸ್ಥಾನದಲ್ಲಿದೆ, ಆದ್ದರಿಂದ ಮಾರಾಟದ ಹೆಚ್ಚಳದೊಂದಿಗೆ, ಇದು ಶ್ರೇಯಾಂಕದಲ್ಲಿ ಅಗಾಧವಾದ ಏರಿಕೆಯನ್ನು ಸಾಧಿಸಿದೆ. ಮಾರುತಿ ಸುಜುಕಿ ಬ್ರೆಝಾ, ಟಾಟಾ ನೆಕ್ಸಾನ್ ಮತ್ತು ಮಹೀಂದ್ರಾ ಮುಂತಾದ ಟಾಪ್ 10 SUV ಗಳನ್ನು ಹಿಂದಿಕ್ಕುವಲ್ಲಿ ಯಶಸ್ವಿಯಾಗಿದೆ. ಈ ವರ್ಷದ ಫೆಬ್ರವರಿಯಲ್ಲಿ ಕ್ರೆಟಾವನ್ನು 15,276 ಗ್ರಾಹಕರು ಖರೀದಿಸಿದ್ದಾರೆ.ಸಿಬ್ಬಂದಿ ನಡೆ ಸಮರ್ಥಿಸಿಕೊಂಡ ಃಒಖಅಐ ಹ್ಯುಂಡೈ ಕ್ರೆಟಾದ ಒಟ್ಟು 28 ಮಾಡೆಲ್‌ಗಳು ಭಾರತೀಯ ಮಾರುಕಟ್ಟೆಯಲ್ಲಿ ಮಾರಾಟಕ್ಕಿವೆ. ಇದರ ಎಕ್ಸ್ ಶೋ ರೂಂ ಬೆಲೆಗಳು ರೂ 11 ಲಕ್ಷದಿಂದ ರೂ 20.15 ಲಕ್ಷದವರೆಗೆ ಪ್ರಾರಂಭವಾಗುತ್ತವೆ. ಕ್ರೆಟಾ ಕಳೆದ ಮಾರ್ಚ್‌ನಲ್ಲಿ ಓ ಲೈನ್ ರೂಪಾಂತರವನ್ನು ಬಿಡುಗಡೆ ಮಾಡಿತು, ಇದರ ಎಕ್ಸ್ ಶೋ ರೂಂ ಬೆಲೆ 16.82 ಲಕ್ಷದಿಂದ ಪ್ರಾರಂಭವಾಗುತ್ತದೆ ಮತ್ತು 20.45 ಲಕ್ಷಕ್ಕೆ ಏರುತ್ತದೆ. ಈ ಕಾರು ಪೆಟ್ರೋಲ್ ಮತ್ತು ಡೀಸೆಲ್ ಎಂಜಿನ್ ಆಯ್ಕೆಗಳಲ್ಲಿ ಲಭ್ಯವಿದೆ.

# ಪಿಯು ಫಲಿತಾಂಶದಲ್ಲಿ ಬೆಸ್ಟ್ ಕಾಲೇಜ್‌ನ ಪ್ರದೀಪ್ ಪಾಟೇಲ್‌ಗೆ ವಿಜ್ಞಾನದಲ್ಲಿ 588, ಭುವನ್‌ಗೆ ವಾಣಿಜ್ಯದಲ್ಲಿ 586



ಬಳ್ಳಾರಿ ಏ 11. ದ್ವಿತೀಯ ಪಿ.ಯು.ಸಿ ಪರೀಕ್ಷೆ ಫಲಿತಾಂಶ ಪ್ರಕಟವಾಗಿದ್ದು ನಗರದ (ಬೆಸ್ಟ್) ಬಳ್ಳಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜು, ಬಳ್ಳಾರಿಯ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳನ್ನು ಪಡೆದುಕೊಂಡಿರುತ್ತಾರೆ. ಕಾಲೇಜಿನ ಒಟ್ಟು 700 ವಿದ್ಯಾರ್ಥಿಗಳ ಶೇಕಡಾವಾರು ಫಲಿತಾಂಶ 96.5% ಆಗಿರುತ್ತದೆ. ಇದರಲ್ಲಿ 210 ಡಿಸ್ಟಿಂಕ್ಷನ್, 415 ಪ್ರಥಮ ದರ್ಜೆ ಮತ್ತು 51 ದ್ವಿತೀಯ ದರ್ಜೆ ಹೊಂದಿರುತ್ತಾರೆ. ವಿಜ್ಞಾನ ವಿಭಾಗದಲ್ಲಿ ಪ್ರದೀಪ್ ಪಾಟೀಲ್ 588/600, ಮಧುಮತಿ  582, ಕೆ. ತೇಜು  582, ಬಸವಲೀಲಾ 578/600, ಆದರ್ಶ- 577/600, ಅನಿಲ್ ಕುಮಾರ್- 577/600, ಇಂದುಧರ-577/600, ವಿನುತಾ.ಎಂ-576/600, ಪಾಟೀಲ್ ಸವಿತಾ.ಎಂ- 574/600, ಮಣಿಕಂಠ.ಎಸ್-572/600, ನಾಗರಾಜ್-571/600 ಹಾಗೂ ವಾಣಿಜ್ಯ ವಿಭಾಗದಲ್ಲಿ ಭುವನ್-586/600, ಯಂಕನಗೌಡ ಮೇಟಿ-576/600, ಮುಂತಾದವರು ಅತಿಹೆಚ್ಚು ಅಂಕಗಳನ್ನು ಪಡೆದುಕೊಂಡು ಅತ್ಯುತ್ತಮ ಪ್ರತಿಭೆ ತೋರಿಸಿದ್ದಾರೆ. ಗಣಿತಶಾಸ್ತ್ರದಲ್ಲಿ 12, ರಸಾಯನಶಾಸ್ತ್ರದಲ್ಲಿ 06, ಗಣಕ ವಿಜ್ಞಾನದಲ್ಲಿ 07, ಭೌತಶಾಸ್ತ್ರದಲ್ಲಿ 03, ಸಂಸ್ಕೃತದಲ್ಲಿ 06, ಲೆಕ್ಕಶಾಸ್ತ್ರದಲ್ಲಿ 02, ಅರ್ಥಶಾಸ್ತ್ರ 02, ವ್ಯವಹಾರ ಅಧ್ಯಯನ 02, ಇಷ್ಟು ವಿದ್ಯಾರ್ಥಿಗಳು 100 ಕ್ಕೆ 100 ಅಂಕಗಳನ್ನು ಗಳಿಸಿರುತ್ತಾರೆ, 550 ಕ್ಕಿಂತಲೂ ಹೆಚ್ಚು ಅಂಕಗಳನ್ನು 138 ವಿದ್ಯಾರ್ಥಿಗಳು ಪಡೆದಿರುತ್ತಾರೆ. ಎಂದು ಕಾಲೇಜಿನ ಪ್ರಾಚಾರ್ಯರಾದ ಕೆ. ವೆಂಕಟೇಶ್ವರರಾವ್ ತಿಳಿಸಿದ್ದಾರೆ. ಎಲ್ಲಾ ವಿದ್ಯಾರ್ಥಿಗಳನ್ನು ಬೆಸ್ಟ್ ಸಂಸ್ಥೆಯ ಅಧ್ಯಕ್ಷರಾದ ಕೋನಂಕಿ ರಾಮಪ್ಪನವರು ಹಾಗೂ ಉಪಾಧ್ಯಕ್ಷರಾದ ಕೋನಂಕಿ ತಿಲ???ಕುಮಾರ್, ಕಾರ್ಯದರ್ಶಿಗಳಾದ ಮನ್ನೆ ಶ್ರೀನಿವಾಸುಲು, ಕಾಲೇಜು ಪ್ರಾಚಾರ್ಯರಾದ ಕೆ. ವೆಂಕಟೇಶ್ವರರಾವ್, ಉಪ ಪ್ರಾಚಾರ್ಯರಾದ ಜಿ. ಶ್ರೀನಿವಾಸರೆಡ್ಡಿ ಮತ್ತು ಸಿಬ್ಬಂದಿವರ್ಗದವರು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

# ಎಸ್ ಆರ್ ಸಂತಿ ಕಾಲೇಜ್ ನೂರಕ್ಕೆ ನೂರರಷ್ಟು ಫಲಿತಾಂಶ







ಹಳ್ಳೂರ10. ಗ್ರಾಮದ ಶ್ರೀ ಎಸ್ ಆರ್ ಸಂತಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ 2024ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಒಂದರ ಫಲಿತಾಂಶ ಪ್ರಕಟವಾಗಿದ್ದು, ಇದು ಕಲಾ ಮತ್ತು ವಾಣಿಜ್ಯ ವಿಭಾಗದ ಫಲಿತಾಂಶದಲ್ಲಿ ನೂರಕ್ಕೆ ನೂರರಷ್ಟು ಫಲಿತಾಂಶವನ್ನು ಸಾಧಿಸಿದೆ.

ಈ ಕಾಲೇಜಿನ ಕುಮಾರಿ .ಭಾಗ್ಯಶ್ರೀ ನಿಂಗಪ್ಪ ಸಾಯನ್ನವರ-586(97.66) ಪ್ರಥಮ, ಕುಮಾರಿ. ರಾಧಿಕಾ ಶಂಕರ ಮೇತ್ರಿ - 579(96.5) ದ್ವಿತೀಯ, ಕುಮಾರಿ.ಸ್ವಾತಿ ಕೆಂಪಣ್ಣ ಕಲ್ಲಾರ-578(96.33) ತೃತೀಯ, ಕುಮಾರಿ ಲಕ್ಷ್ಮಿ ಕಲ್ಲೋಳೆಪ್ಪ ದಡ್ಡಿಮನಿ -574(95.33) ಚತುರ್ಥ ಸ್ಥಾನಗಳನ್ನು ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ .

ಈ ಎಲ್ಲಾ ವಿದ್ಯಾರ್ಥಿನಿಯರನ್ನು ಕಾಲೇಜಿನ ಭೂದಾನಿಗಳು, ಕಾಲೇಜು ಸುಧಾರಣಾ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು, ಊರಿನ ಸಮಸ್ತ ಗ್ರಾಮಸ್ಥರು ಮತ್ತು ಶಿಕ್ಷಣ ಪ್ರೇಮಿಗಳು ಹಾಗೂ ಪ್ರಾಚಾರ್ಯರು ಮತ್ತು ಉಪನ್ಯಾಸಕ ಬಂಧುಗಳು ಅಭಿನಂದಿಸಿದ್ದಾರೆ.

# ವಾಕ್ ಶ್ರವಣದೋಷವುಳ್ಳ ವಕೀಲೆ ಸಾರಾ ಸನ್ನಿ ವಾದ ಆಲಿಸಿದ ಹೈಕೋರ್ಟ್

ಬೆಂಗಳೂರು: ವಾಕ್ ಮತ್ತು ಶ್ರವಣದೋಷವುಳ್ಳ ವಕೀಲೆ ಸಾರಾ ಸನ್ನಿ ಅವರ ವಾದವನ್ನು ಪ್ರಮಾಣೀಕೃತ ದುಭಾಷಿಯ ನೆರವಿನಿಂದ ಆಲಿಸುವ ಮೂಲಕ ಹೈಕೋರ್ಟ್ ಸೋಮವಾರ ಇತಿಹಾಸ ಸೃಷ್ಟಿಸಿತು.

ಕೌಟುಂಬಿಕ ವ್ಯಾಜ್ಯ ಪ್ರಕರಣವೊಂದರಲ್ಲಿ ಪ್ರತಿವಾದಿ ಪತ್ನಿ ಪರವಾಗಿ ಸಾರಾ ಸನ್ನಿ ಅವರು ನ್ಯಾಯಮೂರ್ತಿ ಎಂ ನಾಗಪ್ರಸನ್ನ ನೇತೃತ್ವದ ಏಕಸದಸ್ಯ ಪೀಠದ ಮುಂದೆ ವಾದಿಸಿದರು.

ಸ್ಕಾಟ್ಲೆಂಡ್‌ನಲ್ಲಿರುವ ಪತಿ ಮತ್ತು ಬೆಂಗಳೂರಿನಲ್ಲಿರುವ ಪತ್ನಿಯ ನಡುವಿನ ಕೌಟುಂಬಿಕ ವ್ಯಾಜ್ಯದ ಭಾಗವಾಗಿ ಪತಿಗೆ ಲುಕ್ ಔಟ್ (ಎಲ್‌ಒಸಿ) ನೋಟಿಸ್ ಜಾರಿಗೊಳಿಸಲಾಗಿತ್ತು. ಇದನ್ನು ರದ್ದುಗೊಳಿಸಬೇಕು ಎಂದು ಕೋರಿ ಪತಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯ ನ್ಯಾಯಾಲಯದಲ್ಲಿ ನಡೆಯಿತು. ಪ್ರಕರಣದಲ್ಲಿ ಸಾರಾ ಸನ್ನಿ ಅವರು ಪ್ರತಿವಾದಿಯಾಗಿರುವ ಪತ್ನಿಯ ಪರವಾಗಿ ವಾದಿಸಿದರು.

ಕೆಲ ಕಾಲ ಸಂಜ್ಞೆಗಳ ಮೂಲಕ ವಿಷಯ ಮಂಡಿಸಿದ ಸಾರಾ ವಾದಿಸಿದರು. ಇದಕ್ಕೆ ಪೀಠವು "ಪ್ರತಿವಾದಿ ಪತ್ನಿ ಪರವಾಗಿ ದುಭಾಷಿಯ ನೆರವಿನಿಂದ ಸಾರಾ ಸನ್ನಿ ವಿಸ್ತೃತವಾಗಿ ವಾದಿಸಿದ್ದು, ಇದಕ್ಕೆ ಮೆಚ್ಚುಗೆ ಸೂಚಿಸಬೇಕಿದೆ. ದುಭಾಷಿಯ ನೆರವನಿಂದ ಸಾರಾ ಮಂಡಿಸಿದ ವಾದಕ್ಕೆ ಅಧಿಕೃತವಾಗಿ ಮೆಚ್ಚುಗೆ ಸೂಚಿಸಲಾಗಿದೆ" ಎಂದು ಪೀಠವು ಹೇಳಿತು.

ವಿಚಾರಣೆಯ ಕೊನೆಯ ಹಂತದಲ್ಲಿ ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಅರವಿಂದ್ ಕಾಮತ್ ಅವರು "ವಾಕ್ ಮತ್ತು ಶ್ರವಣದೋಷವುಳ್ಳ ವಕೀಲೆ ಸಾರಾ ವಾದ ಆಲಿಸುವ ಮೂಲಕ ಕರ್ನಾಟಕ ಹೈಕೋರ್ಟ್ ಇತಿಹಾಸ ಸೃಷ್ಟಿಸಿದ್ದು, ಇಂಥ ವಕೀಲೆಯ ವಾದ ಆಲಿಸಿದ ದೇಶದ ಮೊದಲ ಹೈಕೋರ್ಟ್ ಎಂಬ ಹಿರಿಮೆಗೆ ಪಾತ್ರವಾಗಿದೆ. ಸಾರಾ ಅವರು ಸಿಜೆಐ ಮುಂದೆ ವಾದಿಸಿದ್ದರು. ಆದರೆ, ಹೈಕೋರ್ಟ್‌ವೊಂದರಲ್ಲಿ ಇದೇ ಮೊದಲ ಬಾರಿಗೆ ವಾದಿಸಿದ್ದಾರೆ ಎಂದರು.

ಏಪ್ರಿಲ್ 4ರಂದು ಪೀಠವು ಸಾರಾಗೆ ನೆರವಾಗಲು ಮಾಹಿತಿ ಮತ್ತು ತಂತ್ರಜ್ಞಾನದ ಸಚಿವಾಲಯದ ನೆರವಿನಿಂದ ದುಭಾಷಿ ಸಹಾಯ ಪಡೆಯುವಂತೆ ರಿಜಿಸ್ಟ್ರಿಗೆ ನಿರ್ದೇಶಿಸಿತ್ತು.

ಈ ಮಧ್ಯೆ, ಎಲ್‌ಒಸಿ ಹಿಂಪಡೆದು ಪತಿಯನ್ನು ವ್ಯಾಪ್ತಿ ಹೊಂದಿದ ಪೊಲೀಸರ ಮುಂದೆ ಹಾಜರುಪಡಿಸುವಂತೆ ಕೋರಿ ಪತ್ನಿ ಸಲ್ಲಿಸಿದ್ದ ಅರ್ಜಿ ಆಧರಿಸಿ ಪತಿಯನ್ನು ಪ್ರವಾಸ ಕೈಗೊಳ್ಳಲು ಮ್ಯಾಜಿಸ್ಟ್ರೇಟ್ ಅನುಮತಿಸಿದ್ದರು. ಈ ಹಿನ್ನೆಲೆಯಲ್ಲಿ ದೇಶ ತೊರೆದ ಪತಿಯನ್ನು ಬಂಧಿಸುವಂತೆ ಪತ್ನಿ ಕೋರಿದ್ದರು. ಅಲ್ಲದೇ, ಲುಕ್‌ಔಟ್ ಸುತ್ತೋಲೆ ಹೊರಡಿಸಿದ ವ್ಯಕ್ತಿ ಭಾರತಕ್ಕೆ ಮರಳಿದಾಗ ಅನುಸರಿಸಬೇಕಾದ ಮಾರ್ಗಸೂಚಿ ರೂಪಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಆಕೆ ಕೋರಿದ್ದರು.

ಪತಿಯ ವಿರುದ್ಧದ ಲುಕ್‌ಔಟ್ ಸುತ್ತೋಲೆ ಹಿಂಪಡೆದಿರುವ ಮ್ಯಾಜಿಸ್ಟ್ರೇಟ್ ಆದೇಶ ಪ್ರಶ್ನಿಸಿ ಕೇಂದ್ರ ಸರ್ಕಾರ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಾಲಯ ದಾಖಲಿಸಿಕೊಂಡಿದೆ. ಕೇಂದ್ರ ಸರ್ಕಾರವು ಎಲ್‌ಒಸಿ ಸುತ್ತೋಲೆಯು ಕಾರ್ಯಾದೇಶವಾಗಿದ್ದು, ರಾಜ್ಯದ ಎಲ್ಲಾ ಮ್ಯಾಜಿಸ್ಟ್ರೇಟ್‌ಗಳು ಪದೇಪದೇ ಎಲ್‌ಒಸಿ ವಜಾ ಮಾಡುವುದು ಅಥವಾ ಎಲ್‌ಒಸಿ ಹಿಂಪಡೆದು ಪ್ರವಾಸಕ್ಕೆ ಅನುಮತಿಸಿದ್ದಾರೆ ಎಂಬ ಅಂಶಗಳನ್ನು ನ್ಯಾಯಾಲಯದ ಮುಂದಿಟ್ಟಿದೆ. ಈ ಸಂಬಂಧ ಕೇಂದ್ರ ಸರ್ಕಾರದ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಅರ್ಜಿದಾರ ಪತಿಯ ವಕೀಲರಿಗೆ ನ್ಯಾಯಾಲಯವು ಸೂಚಿಸಿದೆ.

ಅಲ್ಲದೇ, ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಪೂರ್ಣಗೊಳ್ಳದಿದ್ದರೆ ತನಿಖೆಯ ಹೆಸರಿನಲ್ಲಿ ದೂರಿನಲ್ಲಿ ಆರೋಪಿಗಳಾಗಿರುವ ಪತ್ನಿಯ ಅತ್ತೆ-ಮಾವ ಅವರ ವಿರುದ್ಧ ಯಾವುದೇ ದುರುದ್ದೇಶಪೂರಿತ ಕ್ರಮಕೈಗೊಳ್ಳಬಾರದು. ಆದರೆ, ಅತ್ತೆ-ಮಾವ ತನಿಖೆಗೆ ಸಹಕರಿಸಬೇಕು ಎಂದು ನ್ಯಾಯಾಲಯ ಆದೇಶಿಸಿದ್ದು, ವಿಚಾರಣೆಯನ್ನು ಏಪ್ರಿಲ್ 19ಕ್ಕೆ ಮುಂದೂಡಿದೆ.

# ವಿದ್ಯಾಭ್ಯಾಸಕ್ಕೆ ನೆರವಾದ ಗೃಹಲಕ್ಷ್ಮಿ ಯೋಜನೆ

ಬೆಂಗಳೂರು: ಗೃಹಲಕ್ಷ್ಮಿ ಯೋಜನೆಯ ಹಣವು ವಿದ್ಯಾಭ್ಯಾಸಕ್ಕೆ ನೆರವಾಯಿತು ಎಂದಿದ್ದ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಕಲಾ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿರುವ ವೇದಾಂತ್ ನಾವಿ ಅವರ ಹೇಳಿಕೆಯ ವಿಡಿಯೋ ಹಂಚಿಕೊಂಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಕಿರು ವಿಡಿಯೋ ಹಂಚಿಕೊಂಡಿರುವ ಕರ್ನಾಟಕ ಕಾಂಗ್ರೆಸ್, ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳು ಜನರ ಬದುಕಿಗೆ ವಿವಿಧ ರೀತಿಯಲ್ಲಿ ಆಸರೆಯಾಗಿರುವುದನ್ನು ಕಂಡು ಸಾರ್ಥಕ ಭಾವ ಮೂಡುತ್ತಿದೆ. ಕೇವಲ ಹತ್ತು ತಿಂಗಳಲ್ಲಿ ನಮ್ಮ ಯೋಜನೆಯಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಪರಿಣಾಮಕಾರಿ ಬದಲಾವಣೆ ತರುತ್ತಿರುವುದು ಹೆಮ್ಮೆಯ ಸಂಗತಿ ಎಂದಿದೆ.

ತಂದೆಯನ್ನು ಕಳೆದುಕೊಂಡ ದ್ವಿತೀಯ ಪಿಯುಸಿಯ ಕಲಾ ವಿಭಾಗದ ಪರೀಕ್ಷೆಯಲ್ಲಿ ರಾಜ್ಯಕ್ಕೆ ಮೊದಲ ಸ್ಥಾನ ಪಡೆದ ವೇದಾಂತ್ ಕುಟುಂಬಕ್ಕೆ ಗೃಹಲಕ್ಷ್ಮಿ ಯೋಜನೆಯ ಹಣ ಶಿಕ್ಷಣ ಪಡೆಯಲು ನೆರವಾಗಿರುವುದು ಯೋಜನೆಯ ಸಾರ್ಥಕತೆಗೆ ಸಾಕ್ಷಿ. ಇಂತಹ ಅದೆಷ್ಟೋ ಜನರ ಬದುಕಲ್ಲಿ ಬದಲಾವಣೆಯನ್ನು ತಂದಿವೆ ನಮ್ಮ ಗ್ಯಾರಂಟಿ ಯೋಜನೆಗಳು. ಕಾಂಗ್ರೆಸ್ ಜನರ ಬದುಕನ್ನು ಕಟ್ಟಿಕೊಡುವ ಮೂಲಕ ದೇಶವನ್ನು ಕಟ್ಟಿದೆ ಎಂದು ಕಾಂಗ್ರೆಸ್ ತಿಳಿಸಿದೆ.

ಸಿದ್ದರಾಮಯ್ಯ ಅವರ ಟ್ವೀಟ್ ಅನ್ನು ಹಂಚಿಕೊಂಡಿರುವ ರಾಹುಲ್ ಗಾಂಧಿ, 'ಇಂತಹ 'ಯಶಸ್ಸಿನ ಕಥೆಗಳು' ನನ್ನನ್ನು ನಂಬುವಂತೆ ಮಾಡುತ್ತವೆ ಮತ್ತು ಮಹಿಳೆಯರ ಖಾತೆಗೆ ಪ್ರತಿ ವರ್ಷ 1 ಲಕ್ಷ ರೂ. ಜಮೆ ಮಾಡುವ ನಮ್ಮ 'ಮಹಾಲಕ್ಷ್ಮಿ' ಗ್ಯಾರಂಟಿಯು ದೇಶದ ಭವಿಷ್ಯವನ್ನು ರೂಪಿಸುವ ಕ್ರಾಂತಿಕಾರಿ ಹೆಜ್ಜೆ ಎಂದು ಸಾಬೀತುಪಡಿಸುತ್ತದೆ' ಎಂದಿದ್ದಾರೆ.

ಮುಂದುವರಿದು, 'ಕರ್ನಾಟಕದಲ್ಲಿ ಕಾಂಗ್ರೆಸ್‌ನ ಗೃಹಲಕ್ಷ್ಮಿ ಯೋಜನೆ ಜಾರಿಯಲ್ಲಿದೆ. ಈ ಯೋಜನೆ ಅಡಿಯಲ್ಲಿ 1 ಕೋಟಿಗೂ ಹೆಚ್ಚು ಮಹಿಳೆಯರು ಪ್ರತಿ ತಿಂಗಳು 2,000 ರೂ.ಗಳನ್ನು ಪಡೆಯುತ್ತಿದ್ದಾರೆ. ಅದೇ ಹಣದಲ್ಲಿ ತಾಯಿಯೊಬ್ಬರು ತನ್ನ ಮಗ ವೇದಾಂತ್ ವಿದ್ಯಾಭ್ಯಾಸಕ್ಕೆ ನೆರವಾದರು ಮತ್ತು ಆತ ಪಿಯುಸಿ ಪರೀಕ್ಷೆಯಲ್ಲಿ ಇಡೀ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾನೆ' ಎಂದು ಹೇಳಿದರು.

'ವೇದಾಂತ್ ಅವರ ಕಥೆಯು ಭಾರತೀಯ ಮಹಿಳೆಯರ ತಪಸ್ಸು ಮತ್ತು ಪ್ರತಿ ಪೈಸೆಯಿಂದ ಮನೆಯನ್ನು ಬಲಪಡಿಸುವ ಇಚ್ಛಾಶಕ್ತಿಗೆ ಜೀವಂತ ಉದಾಹರಣೆಯಾಗಿದೆ. 'ಮಹಾಲಕ್ಷ್ಮಿ ಯೋಜನೆ' ಮೂಲಕ ದೇಶದಾದ್ಯಂತ ಇರುವ ಬಡ ಕುಟುಂಬಗಳ ಮಹಿಳೆಯರು ಪ್ರತಿ ವರ್ಷ 1 ಲಕ್ಷ ರೂ.ಗಳನ್ನು ಪಡೆಯುತ್ತಾರೆ ಎಂಬುದನ್ನು ಊಹಿಸಿದರೆ, ಅದೆಷ್ಟು ವೇದಾಂತಗಳು ತಮ್ಮ ಪ್ರತಿಭೆಯಿಂದ ಕುಟುಂಬದ ಭವಿಷ್ಯವನ್ನು ಬದಲಾಯಿಸುತ್ತಾರೆ? ಕಾಂಗ್ರೆಸ್‌ನ ಈ ಐತಿಹಾಸಿಕ ಯೋಜನೆಯು ಬಡ ಕುಟುಂಬಗಳ ಕನಸುಗಳನ್ನು ನನಸಾಗಿಸುತ್ತದೆ' ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.